## ಸುವಾಸನೆಯ ಪಾರಿಜಾತ



ಭಾರತದಲ್ಲಿ ಹೆಚ್ಚಾಗಿ ಕಂಡುಬರುವ ಪಾರಿಜಾತ ಗಿಡದ ಸುತ್ತಲೂ ಮುಂಜಾನೆ ಹಾಯ್ದರೆ ಈ ಹೂವಿನ ಘಮಲು ಮುತ್ತಿಕ್ಕುತ್ತದೆ. ಇದು ರಾತ್ರಿ ಅರಳುತ್ತದೆ. ಈ ಕಾರಣಕ್ಕೆ ಇಂಗ್ಲಿಷ್‌ನಲ್ಲಿ ನೈಟ್ ಜಾಸ್ಮಿನ್ ಎಂದು ಕರೆಯುವರು. ಓಲಿಯೇಸಿ ಕುಟುಂಬಕ್ಕೆ ಸೇರಿದ ಇದು ನಿಕ್ಟ್ಯಾಂಥಿಸ್ ಜಾತಿಯಲ್ಲಿದೆ.

ಪೂರ್ವಜರು ಬಟ್ಟೆಗೆ ಹಾಕುವ ಕಾವಿ ಬಣ್ಣವನ್ನು ಇದರ ಕೆಂಪು ತೊಟ್ಟಿನಿಂದ ತಯಾರಿಸುತ್ತಿದ್ದರು. ಮಲಬದ್ಧತೆಗೆ ಎಲೆಯ ರಸವನ್ನು ಬಳಸುವರು. ಚರ್ಮರೋಗ, ತಲೆಹೊಟ್ಟು, ಕರುಳಿನ ಹುಳು ನಿವಾರಣೆಗೆ ಇದರಿಂದ ಔಷಧಿ ತಯಾರಿಸುವರು.

—ಪ್ರಕಾಶ ಎಸ್.ಮನ್ನಂಗಿ



## ಬಂಗಾರ ಬಣ್ಣದ ಗೋಣಿ

ಬೆಳಗಿನ ವಾಕ್ ಎನ್ನುವುದು ಪ್ರಕೃತಿಯೊಡನೆ ಒಂದು ಅನುಸಂಧಾನವಿದ್ದಂತೆ. ನಿತ್ಯ ನೂತನ ಈ ಪ್ರಕೃತಿ. ಕಳೆದ ವಾರ ದಾವಣಗೆರೆಯ ಚಿಗಟೇರಿ ಆಸ್ಪತ್ರೆಯ ಎದುರಿನ ವಿಶ್ವೇಶ್ವರಯ್ಯ ಪಾರ್ಕಿನಲ್ಲಿ ಓಡಾಡುತ್ತಿದ್ದೆ. ಆಗ ತಾನೇ ಸೂರ್ಯೋದಯವಾಗಿತ್ತು. ಎಳೆ ಬಿಸಿಲಿನ ಕಿರಣಗಳು ಹೊಳೆಯುತ್ತಿದ್ದವು. ಆಕಸ್ಮಿಕವಾಗಿ ಪಕ್ಕಕ್ಕೆ ನೋಡಿದೆ. ಅಲ್ಲೊಂದು ದೊಡ್ಡ ಮರ. ಆಲದ ಮರದಂತಹ ಎಲೆಗಳು, ಬಿಳಲುಗಳಿರಲಿಲ್ಲ. ಅದರಲ್ಲಿದ್ದ ಬಂಗಾರದ ಹಳದಿ ಬಣ್ಣದ ಹಣ್ಣುಗಳು ಮನಸೆಳೆದವು.

ಅವುಗಳ ಮೈಮೇಲಿದ್ದ ನವಿರಾದ ರೋಮದಂತಹ ರಚನೆ ಆ ಬಿಸಿಲಿಗೆ ಫಳಫಳ ಹೊಳೆಯುತ್ತಿದ್ದವು. ಹಸಿರಿನ ಮರಕ್ಕೆ ಚಿನ್ನದ ಒಡವೆ ಹಾಕಿದಂತೆ. ಈ ಮರ ಗೋಣಿಹಣ್ಣಿನ ಮರವೆಂದು ತಿಳಿಯಿತು. ಪಕ್ಷಿಗಳಿಗೆ ಅದರಲ್ಲಿಯೂ ಕಾಗೆಗಳಿಗೆ ಈ ಹಣ್ಣುಗಳು ಬಹಳ ಪ್ರಿಯ. ಈ ಮರಕ್ಕೆ ಮೈಸೂರು ಫಿಗ್ ಎಂದೂ ಕರೆಯುತ್ತಾರೆ. ತನ್ನೊಡಲ ತುಂಬಾ ಹಣ್ಣುಗಳನ್ನು ತುಂಬಿಕೊಂಡು ಸೂರ್ಯನ ಬಿಸಿಲಿಗೆ ನಾಚಿದಂತೆ ಕಂಡ ಈ ಹಣ್ಣುಗಳ ಸೊಗಸನ್ನು ಮರೆಯಲಾರೆ.ಸುಮ್ಮನೆ ನಡೆಯುವ ಬದಲು ಅಥವಾ ಅನವಶ್ಯಕ ಹರಟೆಯ ಬದಲು ಪ್ರಕೃತಿಯನ್ನು ಪ್ರೀತಿಸುವುದನ್ನು ಕಲಿತರೆ ಸಾರ್ಥಕ. ವಾಕಿಂಗ್ ಸಮಯ ಇಂತಹಾ ಅದೆಷ್ಟೋ ವಿಸ್ಮಯಗಳ ಆಗರ.

—ವೆಂಕಟೇಶ್ ದಾವಣಗೆರೆ

## ಭತ್ತದ ಹೊಟ್ಟಿನಲ್ಲಿ ಕಲಾಕೃತಿ

ಕಲಾವಿದರ ತಮ್ಮ ವಿವಿಧ ಕಲಾಕೃತಿಗಳು ಗಮನ ಸೆಳೆಯುತ್ತವೆ. ವಿಶೇಷವಾಗಿ ತ್ಯಾಜ್ಯದಿಂದ ಮಾಡಿದ ಕಲಾಕೃತಿಗಳು ಅಂದರೆ ಕಸದಿಂದ ರಸ ಎಂಬಂತೆ. ಕಸದಿಂದ ಮಾಡಿದ ಕಲಾಕೃತಿಗಳು ವಿಶೇಷವಾಗಿ ನೋಡುಗರನ್ನು ಅಚ್ಚರಿಯಲ್ಲಿ ತೇಲುವಂತೆ ಮಾಡುತ್ತವೆ. ಈ ಮಾತಿಗೆ ಪುಷ್ಟಿ ನೀಡುವಂತೆ ರಾಯಚೂರಿನ ಮಾನ್ವಿ ತಾಲ್ಲೂಕಿನ ದೇವರಾಜ ಎಂಬುವವರು ಭತ್ತದ ಹೊಟ್ಟಿನಿಂದ ಹಲವಾರು ಕಲಾಕೃತಿಗಳನ್ನು ರಚಿಸಿ, ಎಲ್ಲರ ಹುಬ್ಬೇರುವಂತೆ ಮಾಡಿದ್ದಾರೆ. ದೇಶಕ್ಕಾಗಿ ಹಗಲಿರುಳು ದುಡಿಯುವ, ಪ್ರಾಣವನ್ನೇ ಪಣಕ್ಕಿಟ್ಟು ಹೋರಾಡುವ ಸೈನಿಕರ ಕುರಿತಾಗಿ ಅಭಿಮಾನದಿಂದ ಈ ಕಲಾಕೃತಿಯನ್ನು ಮಾಡಿದ್ದಾರೆ.

—ಈರಣ್ಣ ಬೆಂಗಾಲಿ, ರಾಯಚೂರು.




